**ಓ.ಎಸ್. ನಂಃ 244/2021**

**ಪಿ.ಡಬ್ಲ್ಯೂಃ 1**

**ದಿನಾಂಕ 03.02.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ ಜಿ.ಎಲ್.ಡಿ ವಕೀಲರಿಂದಃ**

18. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಮೂಲ ಸರ್ವೆ ನಂಬರ್ 87/1 ಎಂದು ಇತ್ತು ಎಂದರೆ ಸರಿ. ನಿಡಿ-8 ರಲ್ಲಿ ಇರುವ ಚೆಕ್ಕು ಬಂಧಿ, ನಿಪಿ-11 ರಲ್ಲಿ ಇರುವ ಚೆಕ್ಕು ಬಂಧಿ ಮತ್ತು ದಾವಾ ಆಸ್ತಿಯ ಚೆಕ್ಕು ಬಂಧಿ ಇವೆಲ್ಲಾ ಒಂದೇ ಚೆಕ್ಕು ಬಂಧಿ ಎಂದರೆ ಸರಿ. ಅಸಲು ದಾವೆ ಸಂಖ್ಯೆ 314/2018 ರಲ್ಲಿ ಆದ ನಿಡಿ-8 ಮತ್ತು ನಿಡಿ-9 ರ ರಾಜಿ ಡಿಕ್ರಿ ಪ್ರಕಾರ ದಾವಾ ಆಸ್ತಿಯು ಪ್ರತಿವಾದಿಯ ತಂದೆಯ ಹೆಸರಿಗೆ ನೋಂದಣಿಯಾಗುವ ಬದಲು ನಿಪಿ-11 ರಂತೆ ಪ್ರತಿವಾದಿಯ ಹೆಸರಿಗೆ ನೋಂದಣಿ ಯಾಗಿರುವ ಕಾರಣ ದಾವಾ ಆಸ್ತಿಯು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.

19. ನಿಡಿ-8 ಮತ್ತು ನಿಡಿ-9 ರ ಪ್ರಕಾರ ದಾವಾ ಆಸ್ತಿಯ ಸರ್ವೆ ನಂಬರ್ 87/1 ಎಂದು ಇತ್ತು ಎಂದರೆ ಸರಿ. ನಿಡಿ-8 ಮತ್ತು ನಿಡಿ-9 ರ ಪ್ರಕಾರ ನ್ಯಾಯಾಲಯದ ನಿಯೋಗಿ ದಾವಾ ಆಸ್ತಿಯನ್ನು ಪ್ರತಿವಾದಿಯ ತಂದೆಯ ಹೆಸರಿಗೆ ನೋಂದಣಿ ಮಾಡಲು ಹೋದಾಗ 11-ಇ ನಕಾಶೆಯು ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇರದ ಕಾರಣ ನಂತರ ಪೋಡಿ ಮಾಡಿ ಸರ್ವೆ ನಂಬರ್ 88/3 ಎಂದು 11-ಇ ನಕಾಶೆಯನ್ನು ತಯಾರಿಸಿ, ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಕ್ರಯ ಪತ್ರವನ್ನು ನೋಂದಣಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಾವಾ ಆಸ್ತಿಯು ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ನುಡಿದಿರುತ್ತಾರೆ. ಆದ್ದರಿಂದ ದಾವಾ ಆಸ್ತಿಯು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯಾಗಿದ್ದು, ಪ್ರತಿವಾದಿಯ ಕುಟುಂಬಸ್ಥರಿಗೂ ಸಹ ದಾವಾ ಆಸ್ತಿಯಲ್ಲಿ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**